# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1047 (1299) |
| ಮಾನ್ಯ ಸದಸ್ಯರ ಹೆಸರು | ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 13 /03/2026 |
| ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಾರ್ಮಿಕ ಕಲ್ಯಾಣ ಮಂಡಳಿಗಳಲ್ಲಿ ನೋಂದಾಯಿತ ಕಾರ್ಮಿಕರ ಸಂಖ್ಯೆ ಹಾಗೂ ನಿಜವಾಗಿ ಸೌಲಭ್ಯ ಪಡೆಯುತ್ತಿರುವ ಕಾರ್ಮಿಕರ ಸಂಖ್ಯೆ ಎಷ್ಟು; ಪುರುಷರ ಮತ್ತು ಮಹಿಳೆಯ ಜಿಲ್ಲಾವಾರು ಸಂಖ್ಯೆ ನೀಡುವುದು;</td><td>
ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸು ತ್ತಿರುವ ವಿವಿಧ ಮಂಡಳಿಗಳ ಮೂಲಕ ಜಾರಿಗೊಳಿ ಸುತ್ತಿರುವ ವಿವಿಧ ಯೋಜನೆಗಳಡಿ ಕಾರ್ಮಿಕರನ್ನು ಫಲಾನುಭವಿಗಳನ್ನಾಗಿ ನೋಂದಾಯಿಸುತ್ತಿದ್ದು, ನೋಂದಾಯಿತ ಫಲಾನುಭವಿಗಳ ಸಂಖ್ಯೆ ಹಾಗೂ ನೀಡಲಾಗುತ್ತಿರುವ ಸೌಲಭ್ಯಗಳ ವಿವರ ಈ ಕೆಳಕಂಡಂತಿದೆ.<br><br>
<u>ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:</u><br>
ಈ ಮಂಡಳಿಯಲ್ಲಿ ಒಟ್ಟು 24.81 ಲಕ್ಷ ಕಾರ್ಮಿಕರು ನೋಂದಣಿಯಾಗಿರುತ್ತಾರೆ. ಈ ಎಲ್ಲಾ ಕಾರ್ಮಿಕರು ಮತ್ತು ಅವರ ಅವಲಂಬಿತರು ವಿವಿಧ ರೀತಿಯ ಸೌಲಭ್ಯಗಳನ್ನು ಪಡೆಯಲು ಅರ್ಹರಾಗಿದ್ದು, ಘಟನೆ ಆಧಾರಿತವಾಗಿ ಸೌಲಭ್ಯಗಳಿಗೆ ಅರ್ಜಿ ಸಲ್ಲಿಸುತ್ತಿರುತ್ತಾರೆ.<br><br>
ನೋಂದಣಿಯಾದ ಕಾರ್ಮಿಕರ ಜಿಲ್ಲಾವಾರು ಮತ್ತು ಲಿಂಗವಾರು ಮಾಹಿತಿಯನ್ನು ಅನುಬಂಧ-1 ರಲ್ಲಿ ಒದಗಿಸಿದೆ.<br><br>
<u>ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:</u><br>
ಕಾರ್ಮಿಕ ಇಲಾಖೆಯ ಅಧೀನದಲ್ಲಿ ಬರುವ, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಜಾರಿಗೊಳಿಸುತ್ತಿರುವ ವಿವಿಧ ಯೋಜನೆಗಳಡಿ ನೋಂದಾಯಿತರಾದ ಕಾರ್ಮಿಕರ ವಿವರ ಈ ಕೆಳಕಂಡಂತಿದೆ:
<table>
<tr><th>ಕ್ರ. ಸಂ</th><th>ಯೋಜನೆ</th><th>ಕಾರ್ಮಿಕರ ಸಂಖ್ಯೆ</th></tr>
<tr><td>1</td><td>ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯಡಿ ನೋಂದಣಿ (102 ಅಸಂಘಟಿತ ವರ್ಗಗಳ ಕಾರ್ಮಿಕರು)</td><td>25,45,607</td></tr>
<tr><td>2</td><td>ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ</td><td rowspan="2">1050095</td></tr>
<tr><td>3</td><td>ಕರ್ನಾಟಕ ರಾಜ್ಯ ಮೋಟಾರು ಸಾರಿಗೆ ಹಾಗೂ ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ಮಂಡಳಿ</td></tr>
<tr><td>4</td><td>ಇ-ಶ್ರಮ್ ಕಾರ್ಯಕ್ರಮದಡಿ ನೋಂದಣಿ</td><td>11055779</td></tr>
</table>
</td></tr>
</table>

| | | |
|---|---|---|
| | | <table><tr><td>5</td><td>ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ ಯೋಜನೆ</td><td>30256</td></tr><tr><td>6</td><td>ಕರ್ನಾಟಕ ರಾಜ್ಯ ದಿನಪತ್ರಿಕೆ ಹಾಗೂ ಹಾಲು ವಿತರಣಾ ಕಾರ್ಮಿಕರ ಅಪಘಾತ ಪರಿಹಾರ ಮತ್ತು ವೈದ್ಯಕೀಯ ಸೌಲಭ್ಯ ಯೋಜನೆ:</td><td>11388</td></tr></table><br>ಮೇಲ್ಕಂಡ ಯೋಜನೆಗಳಡಿ ನೋಂದಾಯಿತ ಮತ್ತು ಸೌಲಭ್ಯ ಪಡೆದ ಮಹಿಳಾ ಹಾಗೂ ಪುರುಷ ಕಾರ್ಮಿಕರ ಜಿಲ್ಲಾವಾರು ವಿವರವನ್ನು **ಅನುಬಂಧ-2 & 3**ರಲ್ಲಿ ಒದಗಿಸಿದೆ.<br>**<u>ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ:</u>**<br>ಈ ಮಂಡಳಿಯಲ್ಲಿ ಕಾರ್ಮಿಕರನ್ನು ನೋಂದಾಯಿಸುವ ವ್ಯವಸ್ಥೆ ಇರುವುದಿಲ್ಲ. 2024-25 ನೇ ಸಾಲಿನಲ್ಲಿ 5544609 ಸಂಘಟಿತ ಕಾರ್ಮಿಕರು ವಂತಿಕೆಯನ್ನು ಪಾವತಿಸಿರುತ್ತಾರೆ. ಪುರುಷ ಹಾಗೂ ಮಹಿಳೆಯರ ಜಿಲ್ಲಾವಾರು ವಿವರ **ಅನುಬಂಧ-4 ರಲ್ಲಿ** ಒದಗಿಸಿದೆ. |
| ಆ) | 2023-24ರ ನಂತರ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ನಿಧಿಗೆ ವಿವಿಧ ಮೂಲಗಳಿಂದ ಜಮೆಯಾದ ಮೊತ್ತವೆಷ್ಟು; ಸದರಿ ನಿಧಿ ಸರಿಯಾದ ರೀತಿಯಲ್ಲಿ ಬಳಕೆಯಾಗುತ್ತಿದೆಯೇ; ಇತ್ತೀಚಿನ ಮೂರು ವರ್ಷಗಳ ಬಳಕೆಯ ವಿವರ ಗಳನ್ನು ನೀಡುವುದು; | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ 2023-24ರ ನಂತರ ಅಂದರೆ 2024-25 ರಿಂದ 2025-26 ರವರೆಗೆ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ನಿಧಿಗೆ ವಿವಿಧ ಮೂಲಗಳಿಂದ ಒಟ್ಟು **ರೂ.3698.24** ಕೋಟಿಗಳಷ್ಟು ಮೊತ್ತ ಸಂಗ್ರಹವಾಗಿರುತ್ತದೆ.<br>ಸದರಿ ನಿಧಿಯ ಮೊತ್ತವನ್ನು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ, 1996ರ ಕಲಂ 22 ರ ಉದ್ದೇಶಗಳಿಗಾಗಿ ಬಳಸಲಾಗುತ್ತಿದೆ.<br>ಕಳೆದ 03 ವರ್ಷಗಳಲ್ಲಿ ಮಂಡಳಿಯಿಂದ ವಿವಿಧ ಕ್ಲೈಂ ಅರ್ಜಿಗಳ ವಿಲೇವಾರಿಗಾಗಿ ಮತ್ತು ಆಡಳಿತಾತ್ಮಕ ಖರ್ಚುವೆಚ್ಚಗಳಿಗಾಗಿ ಒಟ್ಟು ರೂ.**2321.94** ಕೋಟಿಗಳಷ್ಟು ಮೊತ್ತವನ್ನು ಖರ್ಚು ಮಾಡಲಾಗಿರುತ್ತದೆ. |
| ಇ) | ಕಾರ್ಮಿಕ ಇಲಾಖೆಯಲ್ಲಿ ಖಾಲಿ ಇರುವ ವಿವಿಧ ವೃಂದದ ಹುದ್ದೆಗಳ ಸಂಖ್ಯೆ ಎಷ್ಟು; ಅವುಗಳನ್ನು ಭರ್ತಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; | ಕಾರ್ಮಿಕ ಆಯುಕ್ತಾಲಯದಲ್ಲಿ ಮಂಜೂರಾದ ಒಟ್ಟು 888 ಹುದ್ದೆಗಳ ಪೈಕಿ 495 ಹುದ್ದೆಗಳು ಭರ್ತಿಯಾಗಿದ್ದು, 393 ಹುದ್ದೆಗಳು ಖಾಲಿ ಇರುತ್ತವೆ. ವಿವಿಧ ವೃಂದಗಳ ಮಾಹಿತಿಯನ್ನು **ಅನುಬಂಧ-5 ರಲ್ಲಿ** ಒದಗಿಸಿದೆ.<br>ಮುಂದುವರೆದು, ಕಾರ್ಮಿಕ ಆಯುಕ್ತಾಲಯದಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡ ಕ್ರಮಗಳು ಈ ಕೆಳಕಂಡಂತಿರುತ್ತದೆ.<br>• 02 ಸಹಾಯಕ ಕಾರ್ಮಿಕ ಆಯುಕ್ತರ ಹುದ್ದೆಗಳನ್ನು ನೇರ ನೇಮಕಾತಿಯಡಿ ಭರ್ತಿ ಮಾಡಲು ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಆರ್ಥಿಕ ಇಲಾಖೆ ಅನುಮತಿ ನೀಡಿರುವುದಿಲ್ಲ.<br>• ನೇರ ನೇಮಕಾತಿ ಕೋಟಾದಡಿ ಖಾಲಿ ಇರುವ 04 ಕಾರ್ಮಿಕ ಅಧಿಕಾರಿ ಹುದ್ದೆಗಳ ಭರ್ತಿಗಾಗಿ ಕರ್ನಾಟಕ ಲೋಕಸೇವಾ ಆಯೋಗದಿಂದ ಆಯ್ಕೆ ಪಟ್ಟಿಯನ್ನು ನಿರೀಕ್ಷಿಸಲಾಗಿದ್ದು, ಆಯ್ಕೆ ಪಟ್ಟಿ ಬಂದ ನಂತರ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲಾಗುವುದು.<br>• 27 ಕಾರ್ಮಿಕ ನಿರೀಕ್ಷಕರ ಹುದ್ದೆಗಳನ್ನು ನೇರ ನೇಮಕಾತಿಯಡಿ ಭರ್ತಿ ಮಾಡಲು ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಆರ್ಥಿಕ ಇಲಾಖೆ ಅನುಮತಿ ನೀಡಿರುವುದಿಲ್ಲ.<br>• ಪ್ರಥಮ ದರ್ಜೆ ಸಹಾಯಕರ 15 ಹುದ್ದೆಗಳ ಭರ್ತಿಗಾಗಿ ಹಾಗೂ ದ್ವಿತೀಯ ದರ್ಜೆ ಸಹಾಯಕರ 21 ಹುದ್ದೆಗಳ ಭರ್ತಿಗಾಗಿ ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ದಿನಾಂಕ: 31.12.2025 ರಂದು ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. |

| | | |
|---|---|---|
| | | ಖಾಲಿ ಇರುವ ಮುಂಬಡ್ತಿ ಹುದ್ದೆಗಳನ್ನು ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಕಾಲಕಾಲಕ್ಕೆ ಭರ್ತಿಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಮುಂದುವರೆದು ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಆರ್ಥಿಕ ಇಲಾಖೆಯಿಂದ ದೊರೆತಿದ್ದ 186 ಹುದ್ದೆಗಳ ಭರ್ತಿಗಾಗಿ ನೇಮಕಾತಿ ಪ್ರಕ್ರಿಯೆ ಕೈಗೊಂಡು ಈಗಾಗಲೇ 85 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ನೀಡಲಾಗಿರುತ್ತದೆ. ಉಳಿದ 101 ಹುದ್ದೆಗಳ ಭರ್ತಿಗಾಗಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ. |
| ಈ) | ಅಸಂಘಟಿತ ವಲಯದ ಕಾರ್ಮಿಕರ ನೋಂದಣಿ ಪ್ರಕ್ರಿಯೆಯಲ್ಲಿ ಎದುರಾಗುತ್ತಿರುವ ತಾಂತ್ರಿಕ ಹಾಗೂ ಆಡಳಿತಾತ್ಮಕ ಸಮಸ್ಯೆಗಳು ಯಾವುವು; | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ಮಂಡಳಿಗಳು ಜಾರಿಗೊಳಿಸುತ್ತಿರುವ ವಿವಿಧ ಯೋಜನೆಗಳ ನೋಂದಣಿ ಮತ್ತು ಅದರ ಸೌಲಭ್ಯಗಳ ವಿತರಣೆ ಸಂಬಂಧಿಸಿದಂತೆ ಆನ್‌ಲೈನ್ ಮೂಲಕ ಒದಗಿಸಲಾಗುತ್ತಿದ್ದು, ಅದರಲ್ಲಿ ಕಂಡುಬರುವಂತಹ ಲೋಪದೋಷಗಳು ಮತ್ತು ಅದನ್ನು ಸರಿಪಡಿಸುವ ಕುರಿತಾದ ಮಾಹಿತಿ ಈ ಕೆಳಕಂಡಂತಿದೆ.<br><br>**<u>ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:</u>**<br>ಈ ಮಂಡಳಿಯಲ್ಲಿ ಅರ್ಹ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರನ್ನು ಫಲಾನುಭವಿಗಳನ್ನಾಗಿ ನೋಂದಾಯಿಸುವ ಸಂದರ್ಭದಲ್ಲಿ ಅವಶ್ಯಕ ದಾಖಲೆ ಗಳನ್ನು ತಂತ್ರಾಂಶದಲ್ಲಿ ನಮೂದಿಸಿದ ನಂತರ ಜಿಪಿಎಸ್ ಆಧಾರಿತ ಲೈವ್ ಫೋಟೋ ಸೆರೆ ಹಿಡಿದು ತಂತ್ರಾಂಶದಲ್ಲಿ ಅಫ್ ಲೋಡ್ ಮಾಡಬೇಕಿರುತ್ತದೆ. ನೈಜ ಕಟ್ಟಡ ಕಾರ್ಮಿಕ ರನ್ನು ನೋಂದಾಯಿಸಿ ಸೌಲಭ್ಯ ನೀಡಬೇಕೆಂಬ ಉದ್ದೇಶದಿಂದ ಈ ರೀತಿ ಲೈವ್ ಫೋಟೋ ಹಾಕುವ ವ್ಯವಸ್ಥೆಯನ್ನು ರೂಪಿಸಲಾಗಿದೆ. ಈ ತಂತ್ರಾಂಶವನ್ನು ಹೊಸದಾಗಿ ರೂಪಿಸಿ ಲೈವ್ ಮಾಡಿದಾಗ ಆರಂಭದಲ್ಲಿ ಮಾತ್ರ ಕೆಲವೊಂದು ತಾಂತ್ರಿಕ ದೋಷಗಳು ಕಂಡು ಬಂದಿದ್ದು, ತದನಂತರ ಅವುಗಳನ್ನು ಪರಿಹರಿಸಲಾಗಿದ್ದು, ಯಾವುದೇ ತಾಂತ್ರಿಕ ಸಮಸ್ಯೆಗಳು ಉಂಟಾದಲ್ಲಿ ಅದನ್ನು ಕೂಡಲೇ ಪರಿಹರಿಸಲು ಕ್ರಮ ಕೈಗೊಳ್ಳಲಾಗಿದೆ. ಪ್ರಸ್ತುತ ನೋಂದಣಿ ಪ್ರಕ್ರಿಯೆ ಸುಲಲಿತವಾಗಿ ನಡೆಯುತ್ತಿರುತ್ತದೆ.<br><br>**<u>ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:</u>**<br>ಈ ಮಂಡಳಿಯು ಜಾರಿಗೊಳಿಸುತ್ತಿರುವ ವಿವಿಧ ಯೋಜನೆಗಳಡಿ ಕಾರ್ಮಿಕರನ್ನು ನೋಂದಾಯಿಸಲಾಗುತ್ತಿದ್ದು ನೋಂದಣಿ ಪ್ರಕ್ರಿಯೆಯಲ್ಲಿ ಈವರೆಗೆ ಯಾವುದೇ ತಾಂತ್ರಿಕ ಹಾಗೂ ಆಡಳಿತಾತ್ಮಕ ಸಮಸ್ಯೆಗಳು ಎದುರಾಗಿರುವುದಿಲ್ಲ. ಮುಂದಿನ ದಿನಗಳಲ್ಲಿ ತಂತ್ರಾಂಶದಲ್ಲಿ ಯಾವುದಾದರೂ ಸಮಸ್ಯೆಗಳು ಕಂಡುಬಂದಲ್ಲಿ, ತಂತ್ರಾಂಶ ಅಭಿವೃದ್ಧಿ ಪಡಿಸಿದ ಸಂಸ್ಥೆಯ ಮೂಲಕ ಕಾಲಕಾಲಕ್ಕೆ ಸರಿಪಡಿಸಲು ಕ್ರಮಕೈಗೊಳ್ಳಲಾಗುವುದು. |
| ಉ) | ಕಾರ್ಮಿಕರ ದೂರುಗಳ ನಿವಾರಣೆಗೆ ಸ್ಥಾಪಿತವಾದ ವ್ಯವಸ್ಥೆ ಪರಿಣಾಮಕಾರಿಯಾಗಿದೆಯೇ; | ಕಾರ್ಮಿಕ ಆಯುಕ್ತಾಲಯದಲ್ಲಿ ವಿವಿಧ ಕಾರ್ಮಿಕ ಕಾಯ್ದೆಯಡಿ ಸಾರ್ವಜನಿಕ ದೂರುಗಳನ್ನು ಸಕಾಲದಲ್ಲಿ ಪರಿಣಾಮಕಾರಿಯಾಗಿ ಪರಿಹರಿಸಲು ಈ ಕೆಳಕಂಡಂತೆ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ; |

| | | |
|---|---|---|
| | | 1. ಸರ್ಕಾರವು ಸಾರ್ವಜನಿಕರ ದೂರುಗಳನ್ನು ದಾಖಲಿಸುವ ಸಲುವಾಗಿ iPGRS (Integrated Public Grievance Redressal System)/ ಏಕೀಕೃತ ಸಾರ್ವಜನಿಕ ಕುಂದುಕೊರತೆಗಳ ಪರಿಹಾರ ವ್ಯವಸ್ಥೆ ಎಂಬ ವೆಬ್ ಪೋರ್ಟಲ್ ಅನ್ನು ಇ-ಗವರ್ನೆನ್ಸ್ ವತಿಯಿಂದ ಪ್ರಾರಂಭಿಸಿದ್ದು, ಸದರಿ ಪೋರ್ಟಲ್ ನಲ್ಲಿ ಇಲಾಖೆಗೆ ಸಂಬಂಧಿಸಿದ ಕಾರ್ಯವ್ಯಾಪ್ತಿಯ ಕಾರ್ಮಿಕ ಅಧಿಕಾರಿಗಳಿಗೆ ನೇರವಾಗಿ ಅರ್ಹ ಕಾರ್ಮಿಕರು/ ನೌಕರರು ಮನವಿ ಸಲ್ಲಿಸಿ, ನಿಯಮಾನುಸಾರ ಪರಿಹಾರ ಪಡೆಯಬಹುದಾಗಿರುತ್ತದೆ.<br>2. CPGRAMS (Centralized Public Grievance Redressal Management System) ಕೇಂದ್ರ ಸಾರ್ವಜನಿಕ ಕುಂದು ಕೊರತೆ ಪರಿಹಾರ ನಿರ್ವಹಣಾ ವ್ಯವಸ್ಥೆ ಮೂಲಕ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುವ ಮನವಿ/ದೂರುಗಳನ್ನು ರಾಜ್ಯ ಸರ್ಕಾರಕ್ಕೆ ವರ್ಗಾಯಿಸಲಾಗುತ್ತದೆ. ಇಂತಹ ದೂರುಗಳನ್ನು ನಿಯಮಾನುಸಾರ ಪರಿಶೀಲಿಸಿ, ಅರ್ಹ ಕಾರ್ಮಿಕರು/ ನೌಕರರಿಗೆ ಸೂಕ್ತ ಪರಿಹಾರ ಒದಗಿಸಲಾಗುತ್ತದೆ.<br>3. **CMOPG** - Chief Minister Office letters ಮುಖ್ಯಮಂತ್ರಿ ಕಛೇರಿ ಪತ್ರಗಳು, **CMJD** -Chief Minister Janatha Darshana ಹಾಗೂ **JSP** ಗಳಲ್ಲಿ ಇಲಾಖೆಗೆ ಸಂಬಂಧಿಸಿದಂತೆ ಸ್ವೀಕೃತವಾಗುವ ಮನವಿ/ ದೂರುಗಳನ್ನು ನಿಯಮಾನುಸಾರ ಪರಿಶೀಲಿಸಿ, ಅರ್ಹ ಕಾರ್ಮಿಕರು/ ನೌಕರರಿಗೆ ಸೂಕ್ತ ಪರಿಹಾರ ಒದಗಿಸಲಾಗುತ್ತದೆ.<br>4. ಮಾನ್ಯ ಸಚಿವರ ಕಛೇರಿ/ ಸಚಿವಾಲಯದ ಮೂಲಕ/ ಸಾರ್ವಜನಿಕರು ನೇರವಾಗಿ ಆಯುಕ್ತಾಲಯಕ್ಕೆ ಮನವಿ/ದೂರು ಸಲ್ಲಿಸಲು ಅವಕಾಶವಿರುತ್ತದೆ.<br>5. ಆಯುಕ್ತಾಲಯದ ಇ-ಮೇಲ್ ವಿಳಾಸ labourcommissioner42@gmail.com ಮೂಲಕ ಸಹ ಮನವಿ/ ದೂರು ಸಲ್ಲಿಸಲು ಅವಕಾಶವಿರುತ್ತದೆ.<br><br>ಹಾಗೆಯೇ ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯದ ಸಮಾಧಾನ ವೆಬ್ ಪೋರ್ಟಲ್ ನಲ್ಲಿ ಸಲ್ಲಿಸಲಾಗುವ ದೂರುಗಳನ್ನು ಸದರಿಯವರಿಗೆ ನೇರವಾಗಿ ಇ-ಮೇಲ್ ಮೂಲಕ ವರ್ಗಾಯಿಸು ತ್ತಿದ್ದು, ಸದರಿ ದೂರು / ಮನವಿಗಳನ್ನು ಕಾರ್ಯವ್ಯಾಪ್ತಿಯ ಅಧಿಕಾರಿಗಳಿಗೆ ಇ-ಮೇಲ್ ಮೂಲಕ ನೇರವಾಗಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗುತ್ತದೆ.<br><br>ಮುಂದುವರೆದು ಕಾರ್ಮಿಕ ಇಲಾಖೆಯ ಸಹಾಯವಾಣಿ ಸಂಖ್ಯೆ:**155214** ಅನ್ನು ಸಹ ಬಳಸಿಕೊಂಡು ಅರ್ಹ ಕಾರ್ಮಿಕರು/ ನೌಕರರು ಮನವಿ/ ದೂರುಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿರುತ್ತದೆ ಹಾಗೂ ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಕಾರ್ಮಿಕರ ದೂರುಗಳನ್ನು ಆಲಿಸಲು 24x7 ಸಹಾಯವಾಣಿಯನ್ನು ಪ್ರಾರಂಭಿಸಲಾಗಿದ್ದು, ಆ ಮೂಲಕ ಕಾರ್ಮಿಕರ ಅಹವಾಲುಗಳನ್ನು ಆಲಿಸಿ ಪರಿಹಾರವನ್ನು ಸಕಾಲದಲ್ಲಿ ಒದಗಿಸಲಾಗುತ್ತಿದೆ. |
| ಊ) | ಕಳೆದ 3 ವರ್ಷಗಳಲ್ಲಿ ಬಂದ ದೂರುಗಳು ಹಾಗೂ ಅವುಗಳ ಪರಿಹಾರದ ವಿವರ ಏನು; | ಕಾರ್ಮಿಕ ಆಯುಕ್ತಾಲಯದಲ್ಲಿ ಕಳೆದ 3 ವರ್ಷಗಳಲ್ಲಿ ಆಯುಕ್ತಾಲಯದ ಹಂತದಲ್ಲಿ ವಿವಿಧ ಕಾರ್ಮಿಕ ಕಾಯ್ದೆಯಡಿ ಸ್ವೀಕೃತವಾದ ದೂರು/ಮನವಿಗಳು ಮಾಹಿತಿಯು ಈ ಕೆಳಕಂಡಂತಿರುತ್ತದೆ: |

**ಕಳೆದ ಮೂರು ವರ್ಷಗಳಲ್ಲಿ ವಿವಿಧ ಕಾರ್ಮಿಕ ಕಾಯ್ದೆಯಡಿ ಆಯುಕ್ತಾಲಯದಲ್ಲಿ ಸ್ವೀಕೃತವಾದ ದೂರು/ಮನವಿಗಳು ವಿವರ**

| ಕ್ರ. ಸಂ. | ವಿವರ | ಆರಂಭದಲ್ಲಿದ್ದ ದೂರುಗಳ ಸಂಖ್ಯೆ | ಸ್ವೀಕೃತವಾದ ದೂರುಗಳ ಸಂಖ್ಯೆ | ಒಟ್ಟು | ವಿಲೇವಾರಿ |
|---|---|---|---|---|---|
| 1 | CPGRAMS | 0 | 1616 | 1616 | 1616 |
| 2 | CMOPG/ CMJD | 0 | 54 | 54 | 54 |
| 3 | DCMJD | 0 | 67 | 67 | 67 |
| 4 | HDKJD | 0 | 2 | 2 | 2 |
| 5 | Jilla janatha dharshana | 0 | 131 | 131 | 131 |
| 6 | ವಿವಿಧ ಮೂಲಗಳಿಂದ ಆಯುಕ್ತಾಲಯದಲ್ಲಿ ಸ್ವೀಕೃತವಾದ ದೂರು (ಇ-ಮೇಲ್ ಹೊರತು ಪಡಿಸಿ) | 1642 | 6455 | 8097 | 5286 |
| | **ಒಟ್ಟು** | **1642** | **8334** | **9976** | **7156** |

ಈ ಮೇಲಿನಂತೆ ಸ್ವೀಕೃತವಾಗುವ ಎಲ್ಲಾ ದೂರುಗಳನ್ನು ನಿಯಮಾನುಸಾರ ಕಾರ್ಯವ್ಯಾಪ್ತಿ/ ಅಧಿಕಾರ ವ್ಯಾಪ್ತಿಯ ಆಧಾರದ ಮೇಲೆ ವಿವಿಧ ಕಾರ್ಮಿಕ ಕಾಯ್ದೆಗಳನ್ನು ಅನುಷ್ಠಾನಗೊಳಿಸಲು ಅಧಿಸೂಚಿಸಿರುವ ಅಧಿಕಾರಿಗಳಿಗೆ ಕಳುಹಿಸಲಾಗುತ್ತಿದ್ದು, ಸದರಿ ಅಧಿಕಾರಿಗಳು ಸದರಿ ಮನವಿ/ ದೂರುಗಳನ್ನು ನಿಯಮಾನುಸಾರ ಪರಿಶೀಲಿಸಿ, ಅರ್ಹ ಕಾರ್ಮಿಕರು/ ನೌಕರರಿಗೆ ಸೂಕ್ತ ಪರಿಹಾರವನ್ನು ಒದಗಿಸಲು ಅಗತ್ಯ ಸೂಕ್ತ ಕ್ರಮವಹಿಸಲಾಗುತ್ತದೆ.

ಮುಂದುವರೆದು, ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಕಳೆದ 03 ವರ್ಷಗಳಲ್ಲಿ ಒಟ್ಟು **18898** ದೂರು/ಸಮಸ್ಯೆ ಪರಿಹಾರಕ್ಕಾಗಿ ಕರೆಗಳು ಬಂದಿದ್ದು, ಅವುಗಳಿಗೆ ಸಕರಾತ್ಮಾಕವಾಗಿ ಪರಿಹಾರವನ್ನು ಒದಗಿಸಲಾಗಿರುತ್ತದೆ.

**ಋ)** ಕಾರ್ಮಿಕ ಕಾನೂನುಗಳ ಉಲ್ಲಂಘನೆಗೆ ಸಂಬಂಧಿಸಿದಂತೆ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಪ್ರಕರಣಗಳು ದಾಖಲಾಗಿವೆ; ಎಷ್ಟು ಪ್ರಕರಣ ಗಳಲ್ಲಿ ಕ್ರಮ ಕೈಗೊಳ್ಳಲಾಗಿದೆ;

ಕಾರ್ಮಿಕ ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ಕಾರ್ಮಿಕ ಕಾಯ್ದೆಗಳನ್ವಯ ಅರ್ಹ ಕಾರ್ಮಿಕ/ನೌಕರರಿಗೆ ಅನ್ವಯಿಸುವ ಕಾರ್ಮಿಕ ಕಾಯ್ದೆಗಳನ್ವಯ ನೀಡಬೇಕಾದ ಶಾಸನಾತ್ಮಕ ಸೌಲಭ್ಯಗಳನ್ನು ನೀಡದೇ ಉಲ್ಲಂಘಿಸಿರುವ ಕುರಿತು ದೈನಂದಿನ ತಪಾಸಣಾ ನಡೆಸುವ ಹಾಗೂ ವಿವಿಧ ಮೂಲಗಳಿಂದ ಸ್ವೀಕೃತವಾಗುವ ದೂರುಗಳ ಮೂಲಕ ಖಾತರಿಪಡಿಸಿಕೊಳ್ಳಲಾಗುವುದು. ತಪಾಸಣಾ ಸಂದರ್ಭದಲ್ಲಿ ಉಲ್ಲಂಘನೆ ಗಳು ಕಂಡುಬಂದಲ್ಲಿ ಹಾಗೂ ಸದರಿ ವಿಷಯದ ಕುರಿತು ಇಲಾಖೆಯಲ್ಲಿ ದೂರುಗಳು ಸ್ವೀಕೃತವಾದಲ್ಲಿ, ಸದರಿ ದೂರುಗಳಿಗೆ ಸಂಬಂಧಿಸಿದಂತ ಕಾರ್ಯವ್ಯಾಪ್ತಿಯ ನಿರೀಕ್ಷಕರು/ ಅಧಿಕಾರಿಗಳು ನಿಯಮಾನುಸಾರ ಪರಿಶೀಲಿಸಿ, ತಪಾಸಣೆ ನಡೆಸಿ, ಉಲ್ಲಂಘನೆಗಳು ಕಂಡುಬಂದಲ್ಲಿ ಸೂಕ್ತ ಕ್ರಮ ಕೈಗೊಂಡು ಪರಿಹಾರವನ್ನು ಒದಗಿಸಲು ಅಗತ್ಯ ಕ್ರಮ ವಹಿಸಲಾಗುತ್ತದೆ.

- ಇಲಾಖೆ ಅನುಷ್ಠಾನಗೊಳಿಸುತ್ತಿರುವ ವಿವಿಧ ಕಾರ್ಮಿಕ ಕಾಯ್ದೆಗಳಡಿ ಕಳೆದ 3 ವರ್ಷದ ಅವಧಿಯಲ್ಲಿ ಅಂದರೆ 2023-24, 2024-25 ಮತ್ತು 2025-26 (ಫೆಬ್ರವರಿ 2026ರ ಅಂತ್ಯಕ್ಕೆ) ರ ಅವಧಿಗಳಲ್ಲಿ ದಾಖಲಾದ ಕ್ಲೇಮ್ ಅರ್ಜಿಗಳ ವಿವರಗಳು ಈ ಕೆಳಕಂಡಂತಿರುತ್ತದೆ;

**ಕನಿಷ್ಟ ವೇತನ ಪಾವತಿಸದಿರುವ ಪ್ರಕರಣಗಳು:**

ಕನಿಷ್ಟ ವೇತನ ಕಾಯ್ದೆ, 1948 ರಡಿ ಕಳೆದ ಮೂರು ವರ್ಷದ ಅವಧಿಯಲ್ಲಿ ಸರ್ಕಾರ ನಿಗಧಿ ಪಡಿಸಿದ ಕನಿಷ್ಟ ವೇತನ ಪಾವತಿಸದ ಮೂಲ ಮಾಲೀಕರು/ ಗುತ್ತಿಗೆದಾರರಿಗೆ ಸಂಬಂಧಿಸಿದಂತೆ ಒಟ್ಟು 41995 ಕಾರ್ಮಿಕರಿಗೆ ಸಂಬಂಧಿಸಿದಂತೆ ರೂ.146.55 ಕೋಟಿ ಮೊತ್ತದ 8850 ಕ್ಲೇಮ್ ಅರ್ಜಿಗಳನ್ನು ಸಕ್ಷಮ ಪ್ರಾಧಿಕಾರಿಗಳು ಮುಂದೆ ದಾಖಲಿಸಲಾಗಿರುತ್ತದೆ. ಅದರಲ್ಲಿ 5937 ಕ್ಲೇಮ್ ಅರ್ಜಿಗಳನ್ನು ವಿಲೇವಾರಿ ಮಾಡಿ, ರೂ.982.00 ಕೋಟಿ ಮೊತ್ತದ ಪಾವತಿಗಾಗಿ ಆದೇಶ ಹೊರಡಿಸಲಾಗಿದ್ದು, ಒಟ್ಟು ರೂ.134.44 ಕೋಟಿ ಮೊತ್ತದ ಕ್ಲೇಮ್ ಮೊತ್ತವನ್ನು 8812 ಕಾರ್ಮಿಕರಿಗೆ ವಿತರಿಸಿ ಪರಿಹಾರ ದೊರಕಿಸಿಕೊಡಲಾಗಿದೆ. ಉಳಿದ ಕ್ಲೇಮ್ ಅರ್ಜಿಗಳು ವಿಚಾರಣಾ ಹಂತದಲ್ಲಿದ್ದು, ನಿಯಮಾನುಸಾರ ಕ್ರಮಕೈಗೊಳ್ಳಲಾಗುತ್ತಿದೆ. ಮಾಹಿತಿಯನ್ನು **ಅನುಬಂದ-6** ರಲ್ಲಿ ಒದಗಿಸಿದೆ.

**ಸಕಾಲದಲ್ಲಿ ವೇತನ ಪಾವತಿಸದಿರುವ ಪ್ರಕರಣಗಳು:**

ವೇತನ ವೇತನ ಕಾಯ್ದೆ, 1936ರಡಿ ಕಳೆದ ಮೂರು ವರ್ಷಗಳಲ್ಲಿ ಒಟ್ಟು 19846 ಕಾರ್ಮಿಕರಿಗೆ ಸಂಬಂಧಿಸಿದಂತೆ ರೂ.26.23 ಕೋಟಿ ಮೊತ್ತದ 2806 ಕ್ಲೇಮ್ ಅರ್ಜಿಗಳನ್ನು ಸಕ್ಷಮ ಪ್ರಾಧಿಕಾರಿಗಳು ಮುಂದೆ ದಾಖಲಿಸಲಾಗಿರುತ್ತದೆ ಹಾಗೂ ಸದರಿ ಪ್ರಾಧಿಕಾರಿಗಳು ಕ್ಲೇಮ್ ಅರ್ಜಿಗಳ ವಿಚಾರಣೆ ನಡೆಸಿ, ಕಳೆದ ಮೂರು ವರ್ಷಗಳಲ್ಲಿ ರೂ.83.31 ಕೋಟಿ ಮೊತ್ತಕ್ಕೆ ಆದೇಶ ಹೊರಡಿಸಿ, ಒಟ್ಟು 2073 ಕ್ಲೇಮ್ ಅರ್ಜಿಗಳನ್ನು ವಿಲೇವಾರಿ ಮಾಡಿ, ರೂ.84.79 ಕೋಟಿ ಗಳನ್ನು ಒಟ್ಟು 4363 ಕಾರ್ಮಿಕರಿಗೆ ವಿತರಿಸಲಾಗಿರುತ್ತದೆ. ಬಾಕಿ ಉಳಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ನಿಯಮಾನುಸಾರ ವಿಚಾರಣೆ ನಡೆಸಿ ಮುಂದಿನ ಕ್ರಮಕೈಗೊಳ್ಳಲಾಗುತ್ತಿದೆ. ಮಾಹಿತಿಯನ್ನು **ಅನುಬಂಧ-7** ರಲ್ಲಿ ಒದಗಿಸಿದೆ.

**ಉಪಧನ ಪಾವತಿ ಕಾಯ್ದೆ, 1972ರನ್ವಯ ಉಪಧನ ಪಾವತಿಸದಿರುವ ಪ್ರಕರಣಗಳು:**

ಉಪಧನ ಪಾವತಿ ಕಾಯ್ದೆ, 1972ರಡಿ ಕಳೆದ ಮೂರು ವರ್ಷಗಳಲ್ಲಿ ಒಟ್ಟು 11865 ಕ್ಲೇಮ್ ಅರ್ಜಿಗಳು ಸ್ವೀಕೃತವಾಗಿದ್ದು, ಅವುಗಳಲ್ಲಿ ಒಟ್ಟು ರೂ.127.82 ಕೋಟಿ ಮೊತ್ತಕ್ಕೆ ಆದೇಶ ಹೊರಡಿಸಿ ಒಟ್ಟು 8502 ಪ್ರಕರಣಗಳನ್ನು ವಿಲೇವಾರಿ ಮಾಡಿ, ರೂ.119.62 ಕೋಟಿ ಮೊತ್ತವನ್ನು ಒಟ್ಟು 6036 ಕಾರ್ಮಿಕರಿಗೆ ವಿತರಿಸಲಾಗಿರುತ್ತದೆ. ಬಾಕಿ ಉಳಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ನಿಯಮಾನುಸಾರ ವಿಚಾರಣೆ ನಡೆಸಿ ಮುಂದಿನ ಕ್ರಮಕೈಗೊಳ್ಳಲಾಗುತ್ತಿದೆ. ಮಾಹಿತಿಯನ್ನು **ಅನುಬಂಧ-8 ರಲ್ಲಿ** ಒದಗಿಸಿದೆ.

**ಹೆರಿಗೆ ಭತ್ಯೆ ಕಾಯ್ದೆ, 1961ರನ್ವಯ ಅರ್ಹ ಮಹಿಳಾ ನೌಕರರು/ಕಾರ್ಮಿಕರಿಗೆ ಹೆರಿಗೆ ಭತ್ಯೆ ಸೌಲಭ್ಯ ಪಾವತಿಸದಿರುವ ಪ್ರಕರಣಗಳು:**

ಹೆರಿಗೆ ಭತ್ಯೆ ಕಾಯ್ದೆ, 1961ರಡಿ ಕಳೆದ ಮೂರು ವರ್ಷಗಳಲ್ಲಿ ಒಟ್ಟು 114 ಕಾರ್ಮಿಕರಿಗೆ ಸಂಬಂಧಿಸಿದಂತೆ ರೂ.66.17 ಲಕ್ಷ ಮೊತ್ತದ ಕ್ಲೇಮ್ ಅರ್ಜಿಗಳನ್ನು ಸಕ್ಷಮ ಪ್ರಾಧಿಕಾರಿಗಳು ಮುಂದೆ ದಾಖಲಿಸಲಾಗಿರುತ್ತದೆ ಹಾಗೂ ಸದರಿ ಪ್ರಾಧಿಕಾರಿಗಳು ಕ್ಲೇಮ್ ಅರ್ಜಿಗಳ ವಿಚಾರಣೆ ನಡೆಸಿ, ಕಳೆದ ಮೂರು ವರ್ಷಗಳಲ್ಲಿ ರೂ.58.88 ಲಕ್ಷ ಮೊತ್ತಕ್ಕೆ ಆದೇಶ ಹೊರಡಿಸಿ, ಒಟ್ಟು 108 ಕ್ಲೇಮ್ ಅರ್ಜಿಗಳನ್ನು

| | | |
|---|---|---|
| | | ವಿಲೇವಾರಿ ಮಾಡಿ, ರೂ.10.35 ಲಕ್ಷಗಳನ್ನು ಒಟ್ಟು 67 ಕಾರ್ಮಿಕರಿಗೆ ವಿತರಿಸಲಾಗಿರುತ್ತದೆ. ಬಾಕಿ ಉಳಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ನಿಯಮಾನುಸಾರ ವಿಚಾರಣೆ ನಡೆಸಿ ಮುಂದಿನ ಕ್ರಮಕೈಗೊಳ್ಳಲಾಗುತ್ತಿದೆ. ಮಾಹಿತಿಯನ್ನು **ಅನುಬಂಧ-9 ರಲ್ಲಿ** ಒದಗಿಸಿದೆ. |
| ಎ) | ಗಿಗ್ ವರ್ಕರ್ಸ್ ಮತ್ತು ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ಕಲ್ಯಾಣ ಯೋಜನೆಗಳ ಅನುಷ್ಠಾನಕ್ಕೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ; ಕಾರ್ಮಿಕರ ಸಾಮಾಜಿಕ ಭದ್ರತೆ ಕನಿಷ್ಠ ವೇತನ ಮತ್ತು ಸುರಕ್ಷತಾ ಮಾನದಂಡಗಳ ಅನುಷ್ಠಾನದಲ್ಲಿ ಕಂಡಬಂದಿರುವ ಕೊರತೆಗಳನ್ನು ಸರಿಪಡಿಸಲು ಸರ್ಕಾರದ ಸಮಗ್ರ ಸುಧಾರಣಾ ಯೋಜನೆಗಳು ಯಾವುವು? | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಲ್ಲಿ ವಿವಿಧ ಯೋಜನ ಗಳನ್ನು ಅನುಷ್ಠಾನ ಗೊಳಿಸಿದ್ದು, ಅದರಲ್ಲಿ, ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ ಯೋಜನೆಯು ಜಾರಿಯಲ್ಲಿದ್ದು ಯೋಜನೆಯ ವಿವರ ಕೆಳಕಂಡಂತಿದೆ.<br><br>**<u>ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ ಯೋಜನೆ:-</u>**<br>ಇ-ಕಾಮರ್ಸ್ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಿಗ್ಗಿ, ಜೊಮಾಟೋಗಳಂತಹ ಸಂಸ್ಥೆಗಳಲ್ಲಿ ಫುಡ್‌ಡೆಲಿವರಿ ಮಾಡುವ ಹಾಗೂ ಮುಂತಾದ ಡೆಲಿವರಿ ವೃತ್ತಿಯಲ್ಲಿ ತೊಡಗಿಕೊಂಡ ಎಲ್ಲಾ ಅಸಂಘಟಿತ ಗಿಗ್ ಕಾರ್ಮಿಕರು ಸೇವಾ ಸಿಂಧು ಹಾಗೂ ಇ-ಶ್ರಮ್ ಪೋರ್ಟಲ್‌ಗಳ ಮೂಲಕ ನೋಂದಾಯಿಸಿಕೊಂಡು ಸ್ಮಾರ್ಟ್‌ಕಾರ್ಡ್ ಪಡೆಯುವ ಮೂಲಕ ಈ ಕೆಳಕಂಡ ಸೌಲಭ್ಯಗಳನ್ನು ಪಡೆಯಬಹುದಾಗಿದೆ:<br><br>**ಸೌಲಭ್ಯಗಳು: -**<br>• ಅಪಘಾತದಿಂದ ಮರಣ ಹೊಂದಿದಲ್ಲಿ ವಿಮಾ ಪರಿಹಾರ ರೂ2.00 ಲಕ್ಷ ಹಾಗೂ ರೂ2.00 ಲಕ್ಷ ಜೀವ ವಿಮಾ ಸೇರಿ ಒಟ್ಟು ರೂ.4.00 ಲಕ್ಷಗಳು.<br>• ಅಪಘಾತದಿಂದ ಶಾಶ್ವತ ದುರ್ಬಲತೆ ಹೊಂದಿದಲ್ಲಿ ರೂ.2.00 ಲಕ್ಷಗಳವರೆಗೆ<br>• ಆಸ್ಪತ್ರೆ ವೆಚ್ಚ ಮರುಪಾವತಿ ರೂ.1.00 ಲಕ್ಷಗಳವರೆಗೆ (ಅಪಘಾತ ಪ್ರಕರಣಗಳಿಗೆ ಮಾತ್ರ)<br>• ಜೀವ ವಿಮಾ ರೂ.2.00 ಲಕ್ಷಗಳು.<br><br>ಮುಂದುವರೆದು, ಗಿಗ್ ಕಾರ್ಮಿಕರಿಗೆ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಒದಗಿಸುವ ಉದ್ದೇಶದಿಂದ ಸಂಪನ್ಮೂಲ ಕ್ರೋಢೀಕರಿಸಲು Karnataka Platform based Gig Workers (Social Security and Welfare) Act, 2025 ಅನ್ನು **ದಿನಾಂಕ:12-09-2025** ರಂದು ಸರ್ಕಾರವು ಅಧಿಸೂಚಿಸಿ ರುತ್ತದೆ ಮತ್ತು ಇದಕ್ಕನುಗುಣವಾಗಿ ನಿಯಮಾವಳಿಯನ್ನು **ದಿನಾಂಕ:19-11-2025** ರಂದು ಅಧಿಸೂಚಿಸಲಾಗಿ ಮಂಡಳಿಯನ್ನು ರಚಿಸಲಾಗಿರುತ್ತದೆ. ಈ ಕಾಯ್ದೆಯಡಿ ಸುಂಕದ ರೂಪದಲ್ಲಿ ಸಂಗ್ರಹವಾಗಬಹುದಾದ ಅನುದಾನದಿಂದ ಮುಂದಿನ ದಿನಗಳಲ್ಲಿ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳನ್ನು ರೂಪಿಸಿ ಜಾರಿ ಗೊಳಿಸಲಾಗುವುದು. |

**ಕಾಇ 107 ಎಲ್‌ಇಟಿ 2026**

**(ಸಂತೋಷ್ ಎಸ್ ಲಾಡ್)**
**ಕಾರ್ಮಿಕ ಸಚಿವರು**

# ಅನುಬಂಧ-1

## ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1299 (1047)

**ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ನೋಂದಣಿಯಾದ ಕಾರ್ಮಿಕರ ಜಿಲ್ಲಾವಾರು ಮತ್ತು ಲಿಂಗವಾರು ಮಾಹಿತಿ**

| ಕ್ರ. ಸಂ. | ಜಿಲ್ಲೆ | ಪುರುಷರು | ಮಹಿಳೆಯರು | ಇತರೆ | ಒಟ್ಟು |
|---|---|---|---|---|---|
| 1 | BAGALKOT | 57811 | 42456 | 133 | 100400 |
| 2 | BANGALORE RURAL | 17601 | 3845 | 30 | 21476 |
| 3 | BANGALORE URBAN | 193329 | 117024 | 296 | 310649 |
| 4 | BELGAUM | 102425 | 45044 | 188 | 147657 |
| 5 | BELLARY | 31831 | 17973 | 60 | 49864 |
| 6 | BIDAR | 49708 | 67100 | 106 | 116914 |
| 7 | BIJAPUR | 44457 | 38389 | 70 | 82916 |
| 8 | CHAMARAJA NAGAR | 30512 | 3250 | 66 | 33828 |
| 9 | CHIKBALLAPUR | 28607 | 10496 | 22 | 39125 |
| 10 | CHIKMAGALUR | 34329 | 23665 | 27 | 58021 |
| 11 | CHITRADURGA | 48961 | 28339 | 90 | 77390 |
| 12 | DAKSHINA KANNADA | 51998 | 4277 | 91 | 56366 |
| 13 | DAVANAGERE | 81221 | 30461 | 69 | 111751 |
| 14 | DHARWAD | 76864 | 34880 | 73 | 111817 |
| 15 | GADAG | 43834 | 24601 | 65 | 68500 |
| 16 | GULBARGA | 53722 | 68039 | 172 | 121933 |
| 17 | HASSAN | 40712 | 16613 | 32 | 57357 |
| 18 | HAVERI | 59203 | 25551 | 87 | 84841 |
| 19 | KODAGU | 5425 | 1018 | 6 | 6449 |
| 20 | KOLAR | 43067 | 33670 | 45 | 76782 |
| 21 | KOPPAL | 68210 | 65789 | 124 | 134123 |
| 22 | MANDYA | 22631 | 5232 | 48 | 27911 |
| 23 | MYSORE | 93807 | 18208 | 128 | 112143 |
| 24 | RAICHUR | 40540 | 23427 | 57 | 64024 |
| 25 | RAMANAGARA | 21164 | 13578 | 29 | 34771 |
| 26 | SHIMOGA | 52357 | 13784 | 62 | 66203 |
| 27 | TUMKUR | 57201 | 26628 | 86 | 83915 |
| 28 | UDUPI | 27748 | 7154 | 31 | 34933 |
| 29 | UTTARA KANNADA | 59797 | 38178 | 47 | 98022 |
| 30 | VIJAYANAGAR | 21384 | 6020 | - | 27404 |
| 31 | YADGIRI | 32197 | 31991 | 72 | 64260 |
| **Total** | | **15,92,653** | **8,86,680** | **2,412** | **24,81,745** |

# ಅನುಬಂಧ-2

## ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1299 (1047)

ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಜಾರಿಗೊಳಿಸುತ್ತಿರುವ ವಿವಿಧ ಯೋಜನೆಗಳಡಿ ನೋಂದಾಯಿತರಾದ ಅಸಂಘಟಿತ ಕಾರ್ಮಿಕರ ಜಿಲ್ಲಾವಾರು ವಿವರ:

| ಕ್ರ.ಸಂ | ಜಿಲ್ಲೆ | ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ | | ಮೋಟಾರು ಸಾರಿಗೆ ಹಾಗೂ ಇತರೆ ಸಂಬಂಧಿತ ಕಾರ್ಮಿಕರು | | ದಿನಪತ್ರಿಕೆ ಹಾಗೂ ಹಾಲು ವಿತರಣಾ ಕಾರ್ಮಿಕರು | | ಇ-ಶ್ರಮ್ | | ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ ಯೋಜನೆ | |
|---|---|---|---|---|---|---|---|---|---|---|---|
| | | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ |
| 1 | ಬಾಗಲಕೋಟೆ | 68049 | 38132 | 68 | 20505 | 315 | 82 | 261682 | 171049 | 166 | 484 |
| 2 | ಬಳ್ಳಾರಿ | 84941 | 55958 | 78 | 23068 | 226 | 68 | 274204 | 215672 | 232 | 1027 |
| 3 | ಬೆಳಗಾವಿ | 199109 | 79085 | 182 | 58180 | 681 | 121 | 608798 | 410940 | 630 | 1298 |
| 4 | ಬೆಂಗಳೂರು ಗ್ರಾಮಾಂತರ | 46725 | 31226 | 233 | 44621 | 277 | 57 | 104971 | 80967 | 162 | 894 |
| 5 | ಬೆಂಗಳೂರು ನಗರ | 191723 | 92679 | 7410 | 177460 | 2403 | 377 | 332135 | 241809 | 534 | 9225 |
| 6 | ಬೀದರ್ | 25556 | 14468 | 104 | 30153 | 112 | 22 | 245455 | 165836 | 49 | 344 |
| 7 | ಚಾಮರಾಜನಗರ | 40940 | 16810 | 884 | 49146 | 226 | 36 | 145576 | 99193 | 81 | 204 |
| 8 | ಚಿಕ್ಕಬಳ್ಳಾಪುರ | 39140 | 24184 | 103 | 21899 | 143 | 30 | 135668 | 101204 | 88 | 366 |
| 9 | ಚಿಕ್ಕಮಗಳೂರು | 25460 | 6835 | 429 | 26090 | 127 | 10 | 116350 | 90328 | 31 | 241 |
| 10 | ಚಿತ್ರದುರ್ಗ | 26149 | 14445 | 128 | 29981 | 235 | 45 | 192454 | 133523 | 108 | 342 |
| 11 | ದಕ್ಷಿಣಕನ್ನಡ | 66662 | 15386 | 411 | 35485 | 136 | 44 | 137071 | 118258 | 95 | 821 |
| 12 | ದಾವಣಗೆರೆ | 48165 | 16869 | 86 | 17714 | 293 | 132 | 196441 | 145195 | 311 | 616 |
| 13 | ಧಾರವಾಡ | 95095 | 30796 | 155 | 37601 | 462 | 81 | 234684 | 157090 | 278 | 1341 |
| 14 | ಗದಗ | 37194 | 19400 | 51 | 23590 | 167 | 104 | 116014 | 92441 | 161 | 389 |
| 15 | ಹಾಸನ | 35116 | 10460 | 237 | 37583 | 188 | 62 | 167930 | 135012 | 90 | 348 |
| 16 | ಹಾವೇರಿ | 60700 | 21040 | 83 | 20434 | 189 | 55 | 211428 | 177506 | 127 | 335 |
| 17 | ಕಲಬುರ್ಗಿ | 10183 | 21433 | 221 | 32775 | 278 | 57 | 390884 | 253111 | 164 | 637 |
| 18 | ಕೊಡಗು | 8268 | 2342 | 319 | 14178 | 49 | 13 | 41828 | 27633 | 32 | 139 |
| 19 | ಕೋಲಾರ | 42448 | 25576 | 89 | 34221 | 247 | 104 | 153557 | 108992 | 113 | 452 |
| 20 | ಕೊಪ್ಪಳ | 41756 | 20977 | 49 | 18737 | 119 | 18 | 158352 | 123872 | 6 | 122 |
| 21 | ಮಂಡ್ಯ | 54616 | 24997 | 85 | 28884 | 229 | 45 | 193246 | 136142 | 112 | 420 |
| 22 | ಮೈಸೂರು | 113179 | 43242 | 1164 | 45389 | 445 | 121 | 303662 | 218561 | 530 | 894 |
| 23 | ರಾಯಚೂರು | 49083 | 29281 | 69 | 20813 | 187 | 45 | 253757 | 180955 | 118 | 545 |
| 24 | ರಾಮನಗರ | 27467 | 17346 | 75 | 17926 | 148 | 30 | 112082 | 79062 | 46 | 361 |
| 25 | ಶಿವಮೊಗ್ಗ | 54902 | 13619 | 647 | 31343 | 315 | 104 | 204744 | 160735 | 265 | 666 |
| 26 | ತುಮಕೂರು | 83895 | 45070 | 103 | 32857 | 291 | 68 | 249721 | 177374 | 148 | 661 |
| 27 | ಉಡುಪಿ | 43696 | 14897 | 174 | 39223 | 135 | 62 | 115209 | 89072 | 85 | 441 |
| 28 | ಉತ್ತರಕನ್ನಡ | 51261 | 20695 | 36 | 12261 | 184 | 36 | 177707 | 136033 | 88 | 590 |
| 29 | ವಿಜಯನಗರ | 4336 | 1753 | 53 | 14834 | 70 | 27 | 71430 | 45922 | 32 | 225 |
| 30 | ವಿಜಯಪುರ | 50803 | 30043 | 157 | 32408 | 287 | 89 | 361401 | 235557 | 218 | 578 |
| 31 | ಯಾದಗಿರಿ | 11439 | 8328 | 95 | 6758 | 75 | 4 | 160327 | 117967 | 17 | 133 |
| **ಒಟ್ಟು** | | **1738056** | **807372** | **13978** | **1036117** | **2149** | **9239** | **6428768** | **4627011** | **5117** | **25139** |

## ಅನುಬಂಧ-3

### ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1299 (1047)

### ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಜಾರಿಗೊಳಿಸುತ್ತಿರುವ ವಿವಿಧ ಯೋಜನೆಗಳಡಿ ಅಸಂಘಟಿತ ಕಾರ್ಮಿಕರಿಗೆ ಸೌಲಭ್ಯ ವಿತರಿಸಿದ ಕಾರ್ಮಿಕರ ವಿವರ

| Sl. No | ಜಿಲ್ಲೆ | ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ | | | ಕರ್ನಾಟಕ ರಾಜ್ಯ ಸಾರಿಗೆ ಕಾರ್ಮಿಕರ ಅಫಘಾತ ಪರಿಹಾರ ಯೋಜನೆ | | | ಗಿಗ್ ಕಾರ್ಮಿಕರ ವಿಮಾ ಯೋಜನೆ | | ದಿನ ಪತ್ರಿಕೆ & ಹಾಲು ವಿತರಕರ ಪರಿಹಾರ ಯೋಜನೆ | | |
|---|---|---|---|---|---|---|---|---|---|---|---|---|
| | | ಫಲಾನುಭವಿಗಳ ಸಂಖ್ಯೆ | | ಒಟ್ಟು ಪರಿಹಾರ ಮೊತ್ತ | ಫಲಾನುಭವಿಗಳ ಸಂಖ್ಯೆ | | ಒಟ್ಟು ಪರಿಹಾರ ಮೊತ್ತ | ಫಲಾನುಭವಿಗಳ ಸಂಖ್ಯೆ(ಪುರುಷ ಫಲಾನುಭವಿ ಮಾತ್ರ) | ಒಟ್ಟು ಪರಿಹಾರ ಮೊತ್ತ | ಫಲಾನುಭವಿಗಳ ಸಂಖ್ಯೆ | | ಒಟ್ಟು ಪರಿಹಾರ ಮೊತ್ತ |
| | | ಮಹಿಳೆ | ಪುರುಷ | | ಮಹಿಳೆ | ಪುರುಷ | | | | ಮಹಿಳೆ | ಪುರುಷ | |
| 1 | ಬಾಗಲಕೋಟೆ | - | - | - | - | 54 | 23150000 | - | - | - | - | - |
| 2 | ಬಳ್ಳಾರಿ | 2 | 2 | 40,000 | - | 83 | 35180601 | - | - | - | - | - |
| 3 | ಬೆಳಗಾವಿ | - | - | - | - | 63 | 26040612 | 2 | 1,19,000 | - | - | - |
| 4 | ಬೆಂಗಳೂರು | - | - | - | - | 15 | 5100000 | - | - | 1 | - | 2,00,000 |
| 5 | ಬೆಂಗಳೂರು | - | - | - | - | 341 | 120187831 | - | - | - | - | - |
| 6 | ಬೀದರ್ | - | - | - | - | 60 | 28343733 | - | - | - | - | - |
| 7 | ಚಾಮರಾಜನಗರ | - | - | - | - | 19 | 8352119 | - | - | - | - | - |
| 8 | ಚಿಕ್ಕಬಳ್ಳಾಪುರ | - | - | - | - | 52 | 23314481 | - | - | - | - | - |
| 9 | ಚಿಕ್ಕಮಗಳೂರು | - | 1 | 10,000 | - | 35 | 13892491 | 1 | 1,00,000 | - | - | - |
| 10 | ಚಿತ್ರದುರ್ಗ | - | - | - | - | 70 | 28116777 | - | - | - | - | - |
| 11 | ದಕ್ಷಿಣಕನ್ನಡ | - | - | - | - | 108 | 38903691 | 1 | 4,00,000 | - | 3 | 3,10,000 |
| 12 | ದಾವಣಗೆರೆ | - | - | - | - | 47 | 12581240 | - | - | - | - | - |
| 13 | ಧಾರವಾಡ | - | - | - | - | 46 | 19651936 | - | - | - | - | - |
| 14 | ಗದಗ | - | - | - | - | 29 | 12860000 | - | - | - | - | - |
| 15 | ಹಾಸನ | - | - | - | - | 27 | 10349662 | - | - | - | - | - |
| 16 | ಹಾವೇರಿ | - | - | - | - | 87 | 34114924 | - | - | - | - | - |
| 17 | ಕಲಬುರ್ಗಿ | - | 2 | 1,10,000 | - | 37 | 15019747 | - | - | - | - | - |
| 18 | ಕೊಡಗು | - | - | - | - | 32 | 14350000 | 1 | 60,384 | - | - | - |
| 19 | ಕೋಲಾರ | - | - | - | - | 21 | 9300000 | - | - | - | - | - |
| 20 | ಕೊಪ್ಪಳ | - | - | - | - | 79 | 33893898 | - | - | - | - | - |
| 21 | ಮಂಡ್ಯ | - | - | - | - | 70 | 26036692 | - | - | - | - | - |
| 22 | ಮೈಸೂರು | - | - | - | - | 61 | 27770000 | - | - | - | 1 | 2,00,000 |

| | | | | | | | | | | | | |
|---|---|---|---|---|---|---|---|---|---|---|---|---|
| 23 | ರಾಯಚೂರು | - | **4** | **40,000** | - | 42 | 18831021 | - | - | - | - | - |
| 24 | ರಾಮನಗರ | - | **1** | **1,00,000** | - | 62 | 23526969 | - | - | - | - | - |
| 25 | ಶಿವಮೊಗ್ಗ | - | - | - | - | 103 | 44704051 | - | - | - | - | - |
| 26 | ತುಮಕೂರು | - | **3** | **30,000** | - | 71 | 23867688 | - | - | - | - | - |
| 27 | ಉಡುಪಿ | - | - | - | - | 36 | 14552376 | - | - | - | **1** | **23,929** |
| 28 | ಉತ್ತರಕನ್ನಡ | - | - | - | - | 14 | 7000000 | - | - | - | - | - |
| 29 | ವಿಜಯನಗರ | - | - | - | - | 75 | 33536283 | - | - | - | - | - |
| 30 | ವಿಜಯಪುರ | - | **1** | **10,000** | - | 8 | 4000000 | - | - | - | - | - |
| 31 | ಯಾದಗಿರಿ | - | **2** | **20,000** | - | 15 | 7180000 | - | - | - | - | - |
| | **ಒಟ್ಟು** | **2** | **16** | **3,60,000** | - | **1862** | **743708823** | **5** | **679384** | **1** | **5** | **733929** |

## ಅನುಬಂಧ-4

### ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ. 1047 (1299)

ಮಂಡಳಿಯ ವಿವಿಧ ಕಲ್ಯಾಣ ಯೋಜನೆಗಳಡಿ 2024-25ನೇ ಸಾಲಿನಲ್ಲಿ ನೀಡಲಾಗಿರುವ ಪುರುಷ ಹಾಗೂ ಮಹಿಳೆಯರ ಜಿಲ್ಲಾವಾರು ವಿವರ ಈ ಕೆಳಕಂಡಂತಿವೆ.

| ಜಿಲ್ಲೆಗಳ ಹೆಸರು | ಶೈಕ್ಷಣಿಕ ಪ್ರೋತ್ಸಾಹ ಧನ | | ಅಂತ್ಯ ಸಂಸ್ಕಾರ | | ಹೆರಿಗೆ ಭತ್ಯೆ | | ವೈದ್ಯಕೀಯ ನೆರವು | | ಅಪಘಾತ ಧನ ಸಹಾಯ | | ವಾರ್ಷಿಕ ವೈದ್ಯಕೀಯ ತಪಾಸಣೆ ಶಿಬಿರ | | ವಾರ್ಷಿಕ ಕ್ರೀಡಾಕೂಟ | |
|---|---|---|---|---|---|---|---|---|---|---|---|---|---|---|
| | ಪುರುಷರು | ಮಹಿಳೆಯರು | ಪುರುಷರು | ಮಹಿಳೆಯರು | ಪುರುಷರು | ಮಹಿಳೆಯರು | ಪುರುಷರು | ಮಹಿಳೆಯರು | ಪುರುಷರು | ಮಹಿಳೆಯರು | ಪುರುಷರು | ಮಹಿಳೆಯರು | ಪುರುಷರು | ಮಹಿಳೆಯರು |
| ಬಾಗಲಕೋಟೆ | 114 | 116 | 0 | 14 | 0 | 1 | 0 | 0 | 0 | 0 | 0 | 0 | 0 | 0 |
| ಬಳ್ಳಾರಿ | 5 | 0 | 0 | 6 | 0 | 1 | 0 | 0 | 0 | 0 | 0 | 0 | 0 | 0 |
| ಬೆಳಗಾವಿ | 520 | 548 | 1 | 28 | 0 | 1 | 1 | 0 | 0 | 0 | 0 | 0 | 0 | 0 |
| ಬೆಂಗಳೂರು ನಗರ | 4135 | 4514 | 16 | 67 | 0 | 417 | 0 | 1 | 0 | 0 | 101 | 9 | 0 | 0 |
| ಬೆಂಗಳೂರು ಗ್ರಾಮಾಂತರ | 405 | 564 | 2 | 18 | 0 | 36 | 0 | 0 | 0 | 0 | 0 | 0 | 0 | 0 |
| ಬೀದರ್ | 4 | 6 | 1 | 16 | 0 | 0 | 0 | 0 | 0 | 0 | 0 | 0 | 0 | 0 |
| ಚಾಮರಾಜನಗರ | 43 | 54 | 0 | 4 | 0 | 0 | 0 | 0 | 0 | 0 | 0 | 0 | 0 | 0 |
| ಚಿಕ್ಕಬಳ್ಳಾಪುರ | 216 | 324 | 0 | 6 | 0 | 7 | 0 | 0 | 0 | 0 | 0 | 0 | 0 | 0 |
| ಚಿಕ್ಕಮಗಳೂರು | 64 | 54 | 0 | 3 | 0 | 6 | 0 | 0 | 0 | 0 | 0 | 0 | 0 | 0 |
| ಚಿತ್ರದುರ್ಗ | 51 | 47 | 0 | 5 | 0 | 1 | 0 | 0 | 0 | 0 | 0 | 0 | 0 | 0 |
| ದಕ್ಷಿಣ ಕನ್ನಡ | 949 | 1214 | 3 | 15 | 0 | 74 | 0 | 0 | 0 | 0 | 0 | 0 | 0 | 0 |
| ದಾವಣಗೆರೆ | 76 | 85 | 1 | 7 | 0 | 3 | 0 | 0 | 0 | 0 | 0 | 0 | 0 | 0 |
| ಧಾರವಾಡ | 134 | 178 | 1 | 12 | 0 | 7 | 0 | 0 | 0 | 0 | 0 | 0 | 0 | 0 |
| ಗದಗ | 10 | 17 | 0 | 6 | 0 | 0 | 0 | 0 | 0 | 0 | 0 | 0 | 0 | 0 |
| ಹಾಸನ | 409 | 493 | 0 | 11 | 0 | 37 | 0 | 0 | 0 | 0 | 0 | 0 | 0 | 0 |
| ಹಾವೇರಿ | 86 | 107 | 3 | 3 | 0 | 3 | 0 | 0 | 0 | 0 | 0 | 0 | 0 | 0 |

| | | | | | | | | | | | | | | |
|---|---|---|---|---|---|---|---|---|---|---|---|---|---|---|
| ಕಲಬುರ್ಗಿ | 1 | 6 | 1 | 1 | 0 | 0 | 0 | 0 | 0 | 0 | 0 | 0 | 0 | 0 |
| ಕೊಡಗು | 15 | 11 | 0 | 4 | 0 | 0 | 0 | 0 | 0 | 0 | 0 | 0 | 0 | 0 |
| ಕೋಲಾರ | 194 | 257 | 1 | 17 | 0 | 19 | 0 | 0 | 0 | 0 | 0 | 0 | 0 | 0 |
| ಕೊಪ್ಪಳ | 3 | 4 | 0 | 4 | 0 | 0 | 0 | 0 | 0 | 0 | 0 | 0 | 0 | 0 |
| ಮಂಡ್ಯ | 747 | 1249 | 3 | 16 | 0 | 25 | 0 | 0 | 0 | 0 | 0 | 0 | 0 | 0 |
| ಮೈಸೂರು | 1118 | 1533 | 2 | 22 | 0 | 19 | 0 | 1 | 0 | 0 | 0 | 0 | 0 | 0 |
| ರಾಯಚೂರು | 0 | 1 | 0 | 8 | 0 | 1 | 0 | 0 | 0 | 0 | 0 | 0 | 0 | 0 |
| ರಾಮನಗರ | 319 | 531 | 3 | 13 | 0 | 9 | 0 | 0 | 0 | 0 | 0 | 0 | 0 | 0 |
| ಶಿವಮೊಗ್ಗ | 524 | 700 | 0 | 6 | 0 | 22 | 0 | 0 | 0 | 0 | 138 | 131 | 0 | 0 |
| ತುಮಕೂರು | 946 | 1171 | 1 | 17 | 0 | 20 | 1 | 0 | 0 | 0 | 0 | 0 | 0 | 0 |
| ಉಡುಪಿ | 1700 | 2215 | 0 | 7 | 0 | 41 | 0 | 0 | 0 | 0 | 0 | 0 | 0 | 0 |
| ಉತ್ತರ ಕನ್ನಡ | 55 | 64 | 0 | 6 | 0 | 0 | 0 | 0 | 0 | 0 | 0 | 0 | 0 | 0 |
| ವಿಜಯಪುರ | 28 | 31 | 0 | 20 | 0 | 0 | 0 | 0 | 0 | 0 | 0 | 0 | 0 | 0 |
| ವಿಜಯನಗರ | 2 | 4 | 0 | 7 | 0 | 0 | 0 | 0 | 0 | 0 | 0 | 0 | 0 | 0 |
| ಯಾದಗಿರಿ | 0 | 0 | 0 | 2 | 0 | 0 | 0 | 0 | 0 | 0 | 0 | 0 | 0 | 0 |
| ಒಟ್ಟು | 12873 | 16098 | 39 | 375 | 0 | 745 | 4 | 74,358 | 0 | 0 | 239 | 140 | 0 | 0 |

# ಅನುಬಂಧ-5

## ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ. 1047 (1299

| ಕ್ರ. ಸಂ. | ಹುದ್ದೆಯ ಪದನಾಮ | ಖಾಲಿ ಹುದ್ದೆಗಳ ಸಂಖ್ಯೆ |
|---|---|---|
| 1 | 2 | 3 |
| **ಗುಂಪು-'ಎ'** | | |
| 1 | ಕಾರ್ಮಿಕ ಆಯುಕ್ತರು | - |
| 2 | ಅಪರ ಕಾರ್ಮಿಕ ಆಯುಕ್ತರು | - |
| 3 | ಜಂಟಿ ಕಾರ್ಮಿಕ ಆಯುಕ್ತರು | - |
| 4 | ಉಪ ಕಾರ್ಮಿಕ ಆಯುಕ್ತರು | 02 |
| 5 | ಸಹಾಯಕ ಕಾರ್ಮಿಕ ಆಯುಕ್ತರು | 03 |
| 6 | ಪತ್ರಾಂಕಿತ ವ್ಯವಸ್ಥಾಪಕರು | - |
| **ಒಟ್ಟು** | | **05** |
| **ಗುಂಪು –'ಬಿ'** | | |
| 7 | ವ್ಯವಸ್ಥಾಪಕರು | 02 |
| 8 | ಕಾರ್ಮಿಕ ಅಧಿಕಾರಿ | - |
| 9 | ಜ್ಯೂನಿಯರ್ ಪ್ರೋಗ್ರಾಮರ್ | 01 |
| **ಒಟ್ಟು** | | **03** |
| **ಗುಂಪು –'ಸಿ'** | | |
| 10 | ಅಧೀಕ್ಷಕರು | 01 |
| 11 | ಹಿರಿಯ ಕಾರ್ಮಿಕ ನಿರೀಕ್ಷಕರು | 07 |
| 12 | ಕಾರ್ಮಿಕ ನಿರೀಕ್ಷಕರು | 23 |
| 13 | ಸಹಾಯಕ ಸಾಂಖ್ಯಿಕ ಅಧಿಕಾರಿ | 02 |
| 14 | ಪ್ರಥಮ ದರ್ಜೆ ಸಹಾಯಕರು | 12 |
| 15 | ದ್ವಿತೀಯ ದರ್ಜೆ ಸಹಾಯಕರು | 31 |
| 16 | ಶೀಘ್ರಲಿಪಿಗಾರರು | 50 |
| 17 | ಬೆರಳಚ್ಚುಗಾರರು | 24 |
| 18 | ವಾಹನ ಚಾಲಕರು | 14 |
| **ಒಟ್ಟು** | | **164** |
| **ಗುಂಪು –'ಡಿ'** | | |
| 19 | ಅಕ್ಷರಸ್ಥ ಸಹಾಯಕರು | 73 |
| 20 | ಜವಾನರು | 144 |
| 21 | ಕಸಗುಡಿಸುವವರು | 01 |
| 22 | ಕಾವಲುಗಾರ | 03 |
| **ಒಟ್ಟು** | | **221** |
| **ಒಟ್ಟು ಹುದ್ದೆ** | | **393** |

# ಅನುಬಂಧ-6

## ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ. 1047 (1299)

| ಕ್ರ. ಸಂ. | ವರ್ಷ | ಕನಿಷ್ಠ ವೇತನ ಕಾಯ್ದೆಯಡಿ ವರ್ಷದ ಪ್ರಾರಂಭದಲ್ಲಿದ್ದ ಕ್ಲೇಮ್ ಅರ್ಜಿಗಳ ಸಂಖ್ಯೆ | ಸ್ವೀಕೃತವಾದ ಕ್ಲೇಮ್ ಅರ್ಜಿಗಳ ಸಂಖ್ಯೆ | ಒಟ್ಟು | ಕಾರ್ಮಿಕರ ಸಂಖ್ಯೆ | ಕ್ಲೇಮ್ ಮೊತ್ತ (ರೂ. ಗಳಲ್ಲಿ) | ವಿಲೇವಾರಿ ಮಾಡಲಾದ ಕ್ಲೇಮ್ ಅರ್ಜಿಗಳ ಸಂಖ್ಯೆ | ಬಾಕಿ ಇರುವ ಕ್ಲೇಮ್ ಅರ್ಜಿಗಳ ಸಂಖ್ಯೆ | ಆದೇಶಿಸಲಾದ ಮೊತ್ತ | ವಿತರಿಸಲಾದ ಒಟ್ಟು ಮೊತ್ತ (ರೂ. ಗಳಲ್ಲಿ) | ಪರಿಹಾರ ಪಡೆದ ಕಾರ್ಮಿಕರ ಸಂಖ್ಯೆ |
|---|---|---|---|---|---|---|---|---|---|---|---|
| 1 | 2023-24 | 5250 | 915 | 6165 | 12877 | 62,53,08,615.80 | 2658 | 3507 | 51,47,74,318.56 | 4,01,00,139.58 | 2805 |
| 2 | 2024-25 | 3507 | 1289 | 4796 | 9730 | 41,46,60,416.00 | 2233 | 2563 | 17,80,56,861.80 | 5,71,96,931.26 | 3204 |
| 3 | 2025-26 (ಫೆಬ್ರುವರಿ 2026ರ ಅಂತ್ಯಕ್ಕೆ) | 2563 | 1396 | 3959 | 19388 | 42,55,04,615.96 | 1046 | 2913 | 28,92,67,413.00 | 3,71,45,523.96 | 2803 |
| ಒಟ್ಟು | | **5250** | **3600** | **8850** | **41995** | **1,46,54,73,647.76** | **5937** | **2913** | **98,20,98,593.36** | **13,44,42,594.80** | **8812** |

## ಅನುಬಂಧ-7

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ. 1047 (1299)**

| ಕ್ರ. ಸಂ. | ವರ್ಷ | ವೇತನ ಪಾವತಿ ಕಾರ್ಯ್ಯಯಡಿ ವರ್ಷದ ಪ್ರಾರಂಭದಲ್ಲಿದ್ದ ಕ್ಲೇಮ್ ಅರ್ಜಿಗಳ ಸಂಖ್ಯೆ | ಸ್ವೀಕೃತ ವಾದ ಕ್ಲೇಮ್ ಅರ್ಜಿಗಳ ಸಂಖ್ಯೆ | ಒಟ್ಟು | ಕಾರ್ಮಿಕರ ಸಂಖ್ಯೆ | ಕ್ಲೇಮ್ ಮೊತ್ತ (ರೂ. ಗಳಲ್ಲಿ) | ವಿಲೇವಾರಿ ಮಾಡಲಾದ ಕ್ಲೇಮ್ ಅರ್ಜಿಗಳ ಸಂಖ್ಯೆ | ಬಾಕಿ ಇರುವ ಕ್ಲೇಮ್ ಅರ್ಜಿಗಳ ಸಂಖ್ಯೆ | ಆದೇಶಿಸಲಾದ ಮೊತ್ತ | ವಿತರಿಸಲಾದ ಒಟ್ಟು ಮೊತ್ತ (ರೂ. ಗಳಲ್ಲಿ) | ಪರಿಹಾರ ಪಡೆದ ಕಾರ್ಮಿಕರ ಸಂಖ್ಯೆ |
|---|---|---|---|---|---|---|---|---|---|---|---|
| 1 | 2023-24 | 1405 | 415 | 1820 | 7334 | 55,06,98,417.00 | 965 | 855 | 26,40,88,197.00 | 2,03,67,749.00 | 1402 |
| 2 | 2024-25 | 855 | 557 | 1412 | 6270 | 1,53,44,13,269.00 | 693 | 719 | 41,74,29,811.00 | 2,85,51,290.00 | 1612 |
| 3 | 2025-26 ( ಫೆಬ್ರವರಿ 2026ರ ಅಂತ್ಯಕ್ಕೆ) | 719 | 429 | 1148 | 6242 | 53,86,66,672.00 | 415 | 733 | 15,15,94,867.00 | 3,58,69,611.00 | 1349 |
| | **ಒಟ್ಟು** | **1405** | **1401** | **2806** | **19846** | **2,62,37,78,358.00** | **2073** | **733** | **83,31,12,875.00** | **8,47,88,650.00** | **4363** |

# ಅನುಬಂಧ-8

## ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ. 1047 (1299)

| ಕ್ರ. ಸಂ. | ವರ್ಷ | ಉಪಧನ ಪಾವತಿ ಕಾಯ್ದೆಯಡಿ ವರ್ಷದ ಪ್ರಾರಂಭದಲ್ಲಿದ್ದ ಕ್ಲೇಮ್ ಅರ್ಜಿಗಳ ಸಂಖ್ಯೆ | ಸ್ವೀಕೃತವಾದ ಕ್ಲೇಮ್ ಅರ್ಜಿಗಳ ಸಂಖ್ಯೆ | ಒಟ್ಟು | ವಿಲೇವಾರಿ ಮಾಡಲಾದ ಕ್ಲೇಮ್ ಅರ್ಜಿಗಳ ಸಂಖ್ಯೆ | ಬಾಕಿ ಇರುವ ಕ್ಲೇಮ್ ಅರ್ಜಿಗಳ ಸಂಖ್ಯೆ | ಆದೇಶಿಸಲಾದ ಮೊತ್ತ | ವಿತರಿಸಲಾದ ಒಟ್ಟು ಮೊತ್ತ (ರೂ. ಗಳಲ್ಲಿ | ಪರಿಹಾರ ಪಡೆದ ಕಾರ್ಮಿಕರ ಸಂಖ್ಯೆ |
|---|---|---|---|---|---|---|---|---|---|
| 1 | 2023-24 | 9368 | 4670 | 14038 | 5339 | 8699 | 47,51,99,734.95 | 41,53,59,056.00 | 1697 |
| 2 | 2024-25 | 8699 | 3639 | 12338 | 4191 | 8147 | 38,62,21,944.00 | 35,85,32,784.00 | 2165 |
| 3 | 2025-26 (ಫೆಬ್ರುವರಿ 2026ರ ಅಂತ್ಯಕ್ಕೆ) | 8147 | 3556 | 11703 | 3201 | 8502 | 41,68,25,992.00 | 42,22,96,417.00 | 2174 |
| | ಒಟ್ಟು | **9368** | **11865** | **21233** | **12731** | **8502** | **1,27,82,47,670.95** | **1,19,61,88,257.00** | **6036** |

# ಅನುಬಂಧ-9

## ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ. 1047 (1299)

| ಕ್ರ. ಸಂ. | ವರ್ಷ | ಹೆರಿಗೆ ಭತ್ಯೆ ಕಾರ್ಯ್ವಯಡಿ ವರ್ಷದ ಪ್ರಾರಂಭದಲ್ಲಿದ್ದ ಕ್ಲೇಮ್ ಅರ್ಜಿಗಳ ಸಂಖ್ಯೆ | ಸ್ವೀಕೃತವಾದ ಕ್ಲೇಮ್ ಅರ್ಜಿಗಳ ಸಂಖ್ಯೆ | ಒಟ್ಟು | ಕಾರ್ಮಿಕರ ಸಂಖ್ಯೆ | ಕ್ಲೇಮ್ ಮೊತ್ತ (ರೂ. ಗಳಲ್ಲಿ) | ವಿಲೇವಾರಿ ಮಾಡಲಾದ ಕ್ಲೇಮ್ ಅರ್ಜಿಗಳ ಸಂಖ್ಯೆ | ಬಾಕಿ ಇರುವ ಕ್ಲೇಮ್ ಅರ್ಜಿಗಳ ಸಂಖ್ಯೆ | ಆದೇಶಿಸಲಾದ ಮೊತ್ತ | ವಿತರಿಸಲಾದ ಒಟ್ಟು ಮೊತ್ತ (ರೂ. ಗಳಲ್ಲಿ) | ಪರಿಹಾರ ಪಡೆದ ಕಾರ್ಮಿಕರ ಸಂಖ್ಯೆ |
|---|---|---|---|---|---|---|---|---|---|---|---|
| 1 | 2023-24 | 15 | 54 | 69 | 69 | 32,95,544.00 | 38 | 31 | 21,94,544.00 | 31,35,896.00 | 28 |
| 2 | 2024-25 | 31 | 30 | 61 | 45 | 15,40,922.00 | 46 | 15 | 24,98,335.00 | 53,04,333.00 | 28 |
| 3 | 2025-26 ( ಫೆಬ್ರುವರಿ 2026ರ ಅಂತ್ಯಕ್ಕೆ) | 15 | 30 | 45 | 43 | 17,81,031.00 | 24 | 21 | 11,95,233.00 | 19,18,253.00 | 11 |
| | ಒಟ್ಟು | **15** | **114** | **129** | **157** | **66,17,497.00** | **108** | **21** | **58,88,112.00** | **1,03,58,482.00** | **67** |